ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 532/2023 CW-7 PW- 4

| | |
|---|---|
| ಹೆಸರು | ಶೇಷಗಿರಿ |
| ತಂದೆಯ ಹೆಸರು | ರಾಮಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಮ್ಯಾನೇಜರ್ ಅಂಬಾವೈನ್ಸ್ |
| ವಾಸ ಸ್ಥಳ | ಬೂದಿಹಾಳ ಕ್ಯಾಂಪ್ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ19-05-2026

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ಚಾ.ಸಾ.1 ಮತ್ತು 6 ರ ಪರಿಚಯ ಇದೆ. ಚಾ.ಸಾ. 6 ಅಂಬಾವೈನ್ಸ್ ಇದರ ಮಾಲೀಕರು ಇರುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನ ಪರಿಚಯ ಇಲ್ಲ. ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

ದಿ: 25-12-2022 ರಂದು ಚಾ.ಸಾ. 1 ರವರು ನನಗೆ ಕಛೇರಿಗೆ ಹಾಜರಾಗಲು ಸೂಚಿಸಿದ ಮೇರೆಗೆ ನಾನು ಅವರ ಮುಂದೆ ಹಾಜರಾಗಿ ಆರೋಪಿ ಈತನ ಪರಿಚಯ ಮತ್ತು ಆತನ ಬಗ್ಗೆ ಮಾಹಿತಿ ಇದೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹಾಗೂ ದಿ: 28-11-2022 ರಂದು ಆರೋಪಿ ಊರಿಗೆ ಹೋಗುವುದಾಗಿ ನನಗೆ ತಿಳಿಸಿ ನಂತರ ಕೆಲವು ದಿನಗಳಾದ ಮೇಲೆ ಆತ ಕೆಲಸಕ್ಕೆ ಬಂದಿಲ್ಲ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಚಾ.ಸಾ. 6 ಇವರಿಗೆ ಆರೋಪಿತನ ಬಗ್ಗೆ ಕೇಳಿದಾಗ ಅವರು ತಮ್ಮ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ತಮ್ಮ ವೈಯಕ್ತಿಕ ಕೆಲಸಕ್ಕಾಗಿ ಹೋಗಿರುತ್ತಾನೆ ಎಂದು ನನಗೆ ಹೇಳಿದ ಬಗ್ಗೆ ನನ್ನ

ಹೇಳಿಕೆಯಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿ: 25-12-2022 ರಂದು ಪೋಲೀಸರ ಮುಂದೆ ನೀಡಿದರೆನ್ನಲಾದ ಹೇಳಿಕೆಯನ್ನು ಸಂಪೂರ್ಣವಾಗಿ ನಿರಾಕರಿಸಿದ್ದು, ಅದನ್ನು ನಿ.ಪಿ. 8 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 8(ಎ) ಎಂದು ಗುರುತಿಸಲಾಯಿತು. ನಿ.ಪಿ. 8 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ. ಮರು ವಿಚಾರಣೆ ಇಲ್ಲ.</u>

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,

ಸಿಂಧನೂರು.